ಅಧ್ಯಕ್ಷರು : ಸೂಪರ್ ಚೀಫ್ ಮಿನಿಸ್ಟರ್ ಇದ್ದಾರೆ ಎಂದು ನಾನು ಹೇಳಿರುವ ಮಾತನ್ನು ಆ ರೀತಿ ಇದ್ದಾರೆ ಎಂದು ಪತ್ರಿಕೆಯವರು ವರದಿ ಮಾಡಿದರೆ ಆ ರೀತಿಯ ಅಭಿಪ್ರಾಯ ಬರುವುದು ಬೇಡ. ಸಾಮಾನ್ಯವಾಗಿ ಅಧಿಕಾರ ಎಲ್ಲಿ ಇರುತ್ತದೆ ಅಲ್ಲಿ ತಮ್ಮಷ್ಟಕ್ಕೆ ತಾವೇ they assert that capacity themselves. You cannot help it. ಒಂದು ವೇಳೆ ಅಂತಹವರು ಯಾರಾದರೂ ಇವರ ಗಮನಕ್ಕೆ ಬರದೇ ಇದ್ದಿದ್ದರೆ, ಅದು ಕೂಡ he will take care of it ಎಂಬ ಮಾತನ್ನು ಹೇಳಿದ್ದಾರೆ. Let not a different type of meaning convey it.

ಶ್ರೀ ಜೆ.ಹೆಚ್. ಪಟೇಲ್: ಬೇರೆ ಉದ್ಯಮಗಳಿಗೆ ನಾವು ಏನು ಕನ್‌ಸೆಷನ್ ಕೊಡುತ್ತೇವೆ, ಬೇಕಾದ್ದು ಮಾಡುತ್ತೇವೆ ಎನ್ನತಕ್ಕಂಥದ್ದು ಸರಿಯಲ್ಲ ಅವರದು ಒಂದೇ ಉದ್ಯಮದ ಬಗ್ಗೆ ನಮ್ಮ ಅಧಿಕಾರಿಗಳು ಕ್ರಮ ತೆಗೆದುಕೊಂಡಿದ್ದರೆ ತಪ್ಪು. ತಪ್ಪು ಮಾಡಿದ ಮೇಲೆ ಎಲ್ಲರಿಗೂ ತನಿಖೆ ಆಗಬೇಕು. ತಪ್ಪು ಮಾಡಿದ ಎಲ್ಲರೂ ದಂಡ ಕಟ್ಟಬೇಕು ಅಲ್ಲದೆ ಈ ವಿಷಯ ನನಗೆ ಈಗ ತಿಳಿಯಿತು. ಕೆಇಬಿ ಆಫೀಸರ್, ಲೋಕಲ್ ಸೂಪರಿಂಟೆಂಡೆಂಟ್ ಇಂಜಿನಿಯರ್, ಚೀಫ್ ಇಂಜಿನಿಯರ್ ಅವರು ಬಹುಶಃ ಮಧ್ಯಾಹ್ನ ಬಂದು ತಿಳಿಸಬಹುದು. ಏಕೆಂದರೆ, ನಿನ್ನೆ ಇದು ಆಪರೇಷನ್ ಆಗಿರುವುದು ಈ ಮಾತನ್ನು ಅವರೇ ಹೇಳಿದರು. ಮಾನ್ಯ ಅಧ್ಯಕ್ಷರೆ, ಈ ವಿರೋಧ ಪಕ್ಷದ ನಾಯಕರು ನಮಗೆ ಏನು ಇವರು ಡೈರೆಕ್ಷನ್ ಕೊಡುವುದು? ಹೇಳಬಾರದ ಮಾತುಗಳನ್ನು ಹೇಳುವುದು ಸ್ವಾಮಿ, ಇದು ತೀರಾ ಬ್ರೇಕಿಂಗ್ ಪಾಯಿಂಟ್‌ಗೆ ಹೋಗಬಾರದು. ದಯವಿಟ್ಟು ಅವರು, ನಾನು ಹೇಗೆ ಮಾತನಾಡುತ್ತೇವೆ ಹಾಗೆ ಅವರು ಮಾತನಾಡಲಿ ಬೇಕಾದರೆ, ಸರ್ಕಾರಕ್ಕೆ ಹೇಗೆ ಹೇಳಬೇಕೋ ಆರೀತಿ ಹೇಳಲಿ, ಆದರೆ ಈ ರೀತಿ ಮಾತನಾಡುವುದು ಸರಿಯಲ್ಲ.

MR SPEAKER : All right, we will close it at that.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾನು ಹೇಳಬಾರದಂತಹ ಮಾತನ್ನು ಏನೂ ಹೇಳಲಿಲ್ಲ. ತಮ್ಮಿಂದ ಡೈರೆಕ್ಷನ್ ಹೋಗಿದೆ ಎಂದರೆ ತಪ್ಪೇ? ನೀವು ಹೇಳಿಲ್ಲ, ಆದರೆ ಬೇರೆಯವರು ಹೇಳಿರುವುದು ತಪ್ಪೇ? ಯಾರ್ಯಾರು ನಮಗೆ ಫೋನ್ ಮಾಡಿದ್ದಾರೆ ಏನೇನು ಹೇಳಿದ್ದಾರೆ ಎನ್ನುವುದನ್ನೂ ಸಹ ಹೇಳುತ್ತೇನೆ. ಆದರೆ ತಾವು ದಯವಿಟ್ಟು ಬೇರೆಯವರಿಗೆ ಗೊತ್ತಿಲ್ಲ ಎಂದು ತಿಳಿದುಕೊಳ್ಳಬಾರದು. ನಾನು ಮಾತನಾಡುವ ರೀತಿಯೇ ಹೀಗೆ, ದಯವಿಟ್ಟು ತಾವು ತಪ್ಪು ಮಾಡಿದ್ದರೆ ಅದನ್ನು ತಿದ್ದಿಕೊಳ್ಳಿ, ಮತ್ತೆ ಆ ರೀತಿ ಮಾಡುವುದಕ್ಕೆ ಹೋಗಬೇಡಿ

ಹುಡಗುಣಿ, ತಾಳಗುಂದ ತಡೆಗಣ್ಣಿನಲ್ಲಿ ಹಾಲು ಶೀತಲೀ ಕೇಂದ್ರದ ಸ್ಥಾಪನೆ

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಇಲ್ಲಿ ಸಚಿವರಾದಂತಹ ಶ್ರೀ ರೇವಣನವರು ಇದ್ದಾರೆ, ಮುಖ್ಯಮಂತ್ರಿಗಳು ಇದ್ದಾರೆ. ಆದುದರಿಂದ ಇದನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುತ್ತೇನೆ. ಇದು ಬಹಳ ಪ್ರಮುಖವಾಂದಂಥದ್ದು ಅಲ್ಲ. ಆದರೆ ಕ್ಷೇತ್ರದ ದೃಷ್ಟಿಯಿಂದ ಮಾತನಾಡುತ್ತೇನೆ. ಹಿಂದೆ ನಾನು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೆ. ತಡಗಣ್ಣಿನಲ್ಲಿ ಹಾಲು ಶಿತಲೀಕೇಂದ್ರವು 10 ವರ್ಷಗಳ

ಹಿಂದೆ ಪ್ರಾರಂಭವಾಯಿತು. ಇಡೀ ತಾಲ್ಲೂಕಿನವರು ನಾವು ಯಾರೂ ಉದ್ಘಾಟನಾ ಕಾರ್ಯಕ್ರಮಕ್ಕೆ ಹೋಗಲಿಲ್ಲ. ಸಕ್ಸಾಪ್ ಆಗಬೇಕಾದಂತಹ, ಗುಜರಿಗೆ ಹಾಕಬೇಕಾದಂತಹ ಮಿಷನ್ ತಂದು ಹಾಕಿದರು. ಅದು ಒಂದೇ ತಿಂಗಳಲ್ಲಿ ನಿಂತು ಹೋಯಿತು. 15-20 ಲಕ್ಷರೂಪಾಯಿ ಈಗ ಇದೆ. ದೊಡ್ಡ ಸೈಟ್ ಇದೆ, ಎಲ್ಲಾ ಇದೆ. ಎಲ್ಲಾ ಇದೆ. ನಾನು ಸಂಬಂಧಪಟ್ಟ ಜನರ ಹತ್ತಿರ ಮಾತನಾಡಿದೆ. ಹುಡುಗುಣ, ತಾಳಗುಂದ ಹೋಬಳಿ ಪೂರ್ತಿ ಬರಗಾಲಕ್ಕೆ ತುತ್ತಾಗಿರುವುದು ಸನ್ಮಾನ್ಯ ಮುಖ್ಯಮಂತ್ರಿಗಳಿಗೂ ಗೊತ್ತಿದೆ. ಅಲ್ಲಿ ಇವತ್ತು ಹೆಚ್ಚು ಹಾಲಿನ ಸಹಕಾರಿ ಸಂಸ್ಥೆಗಳು ಇವೆ. ಅಲ್ಲಿ ಸುತ್ತಿ ಬಳಸಿ ಹಾಲನ್ನು ತೆಗೆದು ಕೊಂಡು ಹೋಗುತ್ತಿದ್ದಾರೆ. ಈ ಕೇಂದ್ರ ನಿಂತು ಹೋಗಿದೆ. ನಾನು ಸಚಿವರ ಹತ್ತಿರ ಮಾತನಾಡಿದಾಗ, ಅವರು, ಇಲ್ಲಾ ನಾನು ಹೇಗಾದರೂ ಮಾಡಿ ಪ್ರಾರಂಭ ಮಾಡುತ್ತೇನೆ. ಮಲ್ಲಾಡು ಅಭಿವೃದ್ಧಿಯಿಂದ ಸ್ವಲ್ಪ ದುಡ್ಡು ಕೊಡಿಸಿದ್ದೇನೆ, ಮುಖ್ಯ ಮಂತ್ರಿಗಳಿಗೂ ಅಪ್ರೋಚ್ ಮಾಡಿದ್ದೇನೆ ಎಂದು ಹೇಳಿದರು. ಈ ಬಗ್ಗೆ ಸಚಿವರು ಸೂಚನೆ ಕೊಟ್ಟಿದ್ದಾರೆ. ಆದರೆ ನಾವು ಇನ್ನೊಂದೆರೆಡು ತಿಂಗಳಲ್ಲಿ ಪ್ರಾರಂಭ ಆಗ ಬಹುದು ಎಂದು ಆಸೆ ಇಟ್ಟುಕೊಂಡಿದ್ದೆವು. ಆದರೆ ಆ ದಿಕ್ಕಿನಲ್ಲಿ ಏನೂ ಆಗಿಲ್ಲ. ದಯಮಾಡಿ ಸಚಿವರು' ಹೇಳಿ ಮಾಡಿಕೊಟ್ಟರೆ, ಬರಗಾಲಕ್ಕೆ ತುತ್ತಾಗಿರುವ ಜನರಿಗೆ ಅನುಕೂಲವಾಗುತ್ತದೆ. ಅದಕ್ಕೆ ಅಲ್ಲಿ ದೊಡ್ಡ ಹಾಲು ಶುದ್ದೀಕರಣ ಕೇಂದ್ರದ ಮೂಲಕ ಹೆಚ್ಚು ಹಾಲು ಸಂಗ್ರಹ ಮಾಡುವುದಕ್ಕೆ ಬರುತ್ತದೆ ಮತ್ತು ಅಲ್ಲಿ ಬಡವರು ಉಳಿದುಕೊಳ್ಳುತ್ತಾರೆ. ದಯಮಾಡಿ ಅದನ್ನು ಬೇಗ ಮಾಡಿಸಿಕೊಡುವುದಕ್ಕೆ ಸಾಧ್ಯವೆ?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) : ಮಾಡಿಸಿಕೊಡುವುದಕ್ಕೆ ಸಂಘದಿಂದ ಮಾತನಾಡಿದ್ದೇನೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಇನ್ನು ಎರಡು ತಿಂಗಳೊಳಗಾಗಿ ಮಾಡಿಸಿ ಕೊಂಡುತ್ತೇನೆ.

ಉತ್ತರ ಹಳ್ಳಿ ಹೋಬಳಿ ಸುಬ್ರಹ್ಮಣ್ಯಪುರ ವ್ಯಾಪ್ತಿಗೆ ಬರತಕ್ಕಂಥ ಭಜಿವನೇಶ್ವರಿ ನಗರದ ಸರ್ವೆ ನಂ.64 ರಲ್ಲಿ ಕಟ್ಟಿದ್ದ ಮನೆಗಳನ್ನು ಬಿ.ಡಿ.ಎ. ಅಧಿಕಾರಿಗಳು ಒಡೆದು ಹಾಕಿರುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಸಭಾಧ್ಯಕ್ಷರೆ, ಉತ್ತರಹಳ್ಳಿ ಹೋಬಳಿ ಸುಬ್ರಮಣ್ಯಪುರ ವ್ಯಾಪ್ತಿಗೆ ಬರತಕ್ಕಂತಹ ಭುವನೇಶ್ವರಿ ನಗರದಲ್ಲಿ ಸರ್ವೆ ನಂ.64ಕ್ಕೆ 1972 ರಲ್ಲಿ ಕೊಟ್ಟಂತಹ ಹಕ್ಕುಪತ್ರಗಳ ಆಧಾರದ ಮೇಲೆ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಮೊನ್ನೆ ಶನಿವಾರ ಮತ್ತು ಭಾನುವಾರದಂದು ಬಿ.ಡಿ.ಎ. ಅಧಿಕಾರಿಗಳು ಅಲ್ಲಿಗೆ ಹೋಗಿ ಮನೆಗಳನ್ನೆಲ್ಲಾ ಒಡೆದು ಹಾಕಿದ್ದಾರೆ. 1972ರಲ್ಲಿ ಮೊದಲ ಬಾರಿಗೆ ಶ್ರೀ ಬಸವಲಿಂಗಪ್ಪನವರು ಇದ್ದಂತಹ ಕಾಲದಲ್ಲಿ ಸರ್ವೆ ನಂ.64ಕ್ಕೆ ಹಕ್ಕು ಪತ್ರ ಕೊಟ್ಟಿದ್ದಾರೆ, ಮತ್ತು ಆಶ್ರಯ ಯೋಜನೆಯಲ್ಲಿ ಶ್ರೀ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಂತಹ ಕಾಲದಲ್ಲಿ ಹಕ್ಕುಪತ್ರಗಳನ್ನು ಕೊಟ್ಟಿದ್ದಾರೆ, ಮತ್ತು ಸರ್ವೆ ನಂ.64ಕ್ಕೆ ಖಾತಾ ಕೂಡ ಆಗಿದೆ. ವೆಂಕಟಪ್ಪ ಬಿನ್.ಹನುಮಂತಯ್ಯನವರಿಗೆ 1972ರಲ್ಲಿ ಖಾತೆ ಕೂಡ ಆಗಿದೆ, ಮತ್ತು ಅದರಲ್ಲಿ ಇನ್ನೊಂದು ಗೋಮಾಳದ ಜಮೀನುಗಳು ಎಂದು ಹೇಳಿ, ಮೊದಲೇ ಈ ಜಮೀನುಗಳ ಹಕ್ಕುಪತ್ರಗಳನ್ನು ಹಂಚಿಕೆ ಮಾಡಿ, ಮತ್ತೆ 1972ರಿಂದ ಅಲ್ಲಿ ವಾಸ ಮಾಡುತ್ತಿರತಕ್ಕಂತಹ ಸುಮಾರು 800 ಜನರ 800 ಮನೆಗಳನ್ನು ಏಕಾ ಏಕಿ ಒಡೆದು ಹಾಕಿದ್ದಾರೆ. ಅದರ ಸ್ಕೆಚ್ ಕೂಡ ನನ್ನ ಹತ್ತಿರ ಇದೆ. ಬಡವರು